ವಿಷಯ:- ಬೀದರ್ ಜಿಲ್ಲೆಯಲ್ಲಿ ವೈದ್ಯಕೀಯ ಮಹಾವಿದ್ಯಾಲಯದ ಮಂಜೂರಾತಿ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ ೬೯:- (೪೮೨)
ಶ್ರೀ ಬಸವರಾಜ್ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ)
ಮಾನ್ಯ ವೈದ್ಯಕೀಯ ಶಿಕ್ಷಣ ಮಂತ್ರಿಗಳು ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬೀದರ್ ಜಿಲ್ಲೆಯಲ್ಲಿ ವೈದ್ಯಕೀಯ ಕಾಲೇಜು ಇಲ್ಲದೆ ಅಲ್ಲಿನ ವಿದ್ಯಾರ್ಥಿಗಳಿಗೆ ತೊಂದರೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಅಲ್ಲಿ ವೈದ್ಯಕೀಯ ಕಾಲೇಜು ಪ್ರಾರಂಭಿಸುವ ವಿಚಾರ ಏನಾದರೂ ಇದೆಯೇ?

ಇ) ವೈದ್ಯಕೀಯ ಕಾಲೇಜು ಪ್ರಾರಂಭಿಸಲು ಇಲ್ಲಿಯವರೆಗೆ ಎಷ್ಟು ಅರ್ಜಿಗಳು ಅನುಮತಿ ಕೋರಿದ ಸಂಘ ಸಂಸ್ಥೆಗಳ ಪೂರ್ಣ ವಿವರ ನೀಡುವುದು?

ಈ) ಬಸವ ಕಲ್ಯಾಣದಲ್ಲಿ ಸರ್ಕಾರಿ ಅಥವಾ ಖಾಸಗಿ ಗ್ರಾಮಾಂತರ ವೈದ್ಯಕೀಯ ಕಾಲೇಜು ಪ್ರಾರಂಭಿಸಲು ಸಾರ್ವಜನಿಕರಿಂದ ಅಥವಾ ಸಂಘ ಸಂಸ್ಥೆಗಳಿಂದ ಬೇಡಿಕೆ ಏನಾದರೂ ಬಂದಿದೆಯೇ?

ಉ) ಬಂದಿದ್ದಲ್ಲಿ, ಆ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮವೇನು?

ಶ್ರೀ.ಜಿ. ರಾಮಕೃಷ್ಣ
(ವೈದ್ಯಕೀಯ ಶಿಕ್ಷಣ ಸಚಿವರು)

ಇಲ್ಲ
ಉದ್ಭವಿಸುವುದಿಲ್ಲ
೩೬ (ಮೂವತ್ತಾರು) ವಿವರಗಳನ್ನು ಅನುಬಂಧ- 'ಎ' ನಲ್ಲಿ ಲಗತ್ತಿಸಲಾಗಿದೆ.
ಇಲ್ಲ
ಉದ್ಭವಿಸುವುದಿಲ್ಲ

ಅನುಬಂಧ-ಎ

ವೈದ್ಯಕೀಯ ಕಾಲೇಜು ಮಂಜೂರಾತಿ ಕೋರಿ ಬಂದಿರುವ ಅರ್ಜಿಗಳು

೧. ಶ್ರೀಜಗದ್ಗುರು ಮುರುಘ್ ರಾಜೇಂದ್ರ ವಿದ್ಯಾಪೀಠ, ಚಿತ್ರದುರ್ಗ
೨. ಸಿದ್ಧಗಂಗಾ ಎಜುಕೇಷನ್ ಸೊಸೈಟಿ, ತುಮಕೂರು
೩. ಆಲ್ ಮಹಮದ್ ಸೊಸೈಟಿ, ಭದ್ರಾವತಿ
೪. ಅಕಾಡೆಮಿ ಆಫ್ ಲಿಬರಲ್ ಎಜುಕೇಷನ್, ಸುಳ್ಯ, ದಕ್ಷಿಣ ಕನ್ನಡ
೫. ಶರಬೇಶ್ವರ ವಿದ್ಯಾಪೀಠ, ಬಳ್ಳಾರಿ
೬. ನಿಟ್ಟೆ ಎಜುಕೇಷನ್ ಟ್ರಸ್ಟ್, ಕಾರ್ಕಳ, ದಕ್ಷಿಣ ಕನ್ನಡ
೭. ಕರ್ನಾಟಕ ಲಾ ಸೊಸೈಟಿ, ಬೆಳಗಾಂ
೮. ಮಲೆನಾಡು ಮೆಡಿಕಲ್ ಕಾಲೇಜು (ಬಿ.ಆರ್. ಅಂಬೇಡ್ಕರ್ ಮಿಷನ್) ಶಿವಮೊಗ್ಗ
೯. ರಾಷ್ಟ್ರೀಯ ಶಿಕ್ಷಣ ಸಮಿತಿ, ಶಿವಮೊಗ್ಗ.
೧೦. ಫಾದರ್‌ಮುಲ್ಲರ್ ಇನ್ಸ್‌ಟ್ಯೂಟ್, ಕಂಕನಾಡಿ, ಮಂಗಳೂರು
೧೧. ಸಹ್ಯಾದ್ರಿ ಎಜುಕೇಷನ್ ಟ್ರಸ್ಟ್, ಶಿವಮೊಗ್ಗ
೧೨. ಶ್ರೀ ವೀಣಾಶಾರದ ಎಜುಕೇಷನ್ ಸೊಸೈಟಿ, ಹಾಸನ.
೧೩. ತಾರಾನಾಥ್ ಶಿಕ್ಷಣ ಸಂಸ್ಥೆ, ರಾಯಚೂರು

೧೪. ಕರ್ನಾಟಕ ರಾಷ್ಟ್ರೀಯ ಶಿಕ್ಷಣ ಸಂಸ್ಥೆ, ಬೀದರ್.
೧೫. ಖಾಜಾ ಶಿಕ್ಷಣ ಸಂಸ್ಥೆ, ಗುಲ್ಬರ್ಗಾ.
೧೬. ಆಲ್ ಮಹಮದ್ ವಿದ್ಯಾಪೀಠ, ಬಂಡಿಪೋಟ್, ಬಳ್ಳಾರಿ
೧೭. ಶರಬೇಶ್ವರ ವಿದ್ಯಾಪೀಠ, ಬಂಡಿಪೋಟ್, ಬಳ್ಳಾರಿ.
೧೮. ನಾನಕ್‌ಜೀರ್, ಪೌಂಡೇಶನ್, ಬೀದರ್.
೧೯. ಜಗದ್ಗುರು ಮೂರುಸಾವಿರದ ಮಠ, ಜೆ.ಜೆ.ಸಹಕಾರ ಸಂಘ ರೂರಲ್ ಮೆಡಿಕಲ್ ಕಾಲೇಜು, ಹುಬ್ಬಳ್ಳಿ.
೨೦. ಶ್ರೀ ವೀಣಾಶಾರದ ಎಜುಕೇಷನ್, ಸೊಸೈಟಿ, ಶಿವಮೊಗ್ಗ.
೨೧. ಚಾಮುಂಡಿ ಮೆಡಿಕಲ್ ಪೌಂಡೇಶನ್, ಬೆಂಗಳೂರು
೨೨. ಕರ್ನಾಟಕ ಪೀಪಲ್ ಎಜುಕೇಷನ್ ಸೊಸೈಟಿ, ಗುಲ್ಬರ್ಗಾ.
೨೩. ಶಾಂತಿವರ್ಧಕ ಶಿಕ್ಷಣ ಸಂಸ್ಥೆ, ಭಾಲ್ಕಿ.
೨೪. ಇಸ್ಲಾಮಿಕ್ ಅಕಾಡೆಮಿ ಆಫ್ ಎಜುಕೇಷನ್-ಯನಾಪೋಯ, ಮಂಗಳೂರು.
೨೫. ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಶಿಕ್ಷಣ ಸಂಸ್ಥೆ, ಉಜಿರೆ- ಧಾರವಾಡದಲ್ಲಿ.
೨೬. ಶ್ರೀನಿವಾಸ ಟ್ರಸ್ಟ್, ಬೆಂಗಳೂರು.
೨೭. ಸರ್.ಎಂ. ವಿಶ್ವೇಶ್ವರಯ್ಯ ಎಜುಕೇಷನ್ ಟ್ರಸ್ಟ್, ಕೋಲಾರ.
೨೮. ಶರಾವತಿ ಎಜುಕೇಷನ್ ಟ್ರಸ್ಟ್, ಶಿವಮೊಗ್ಗ.
೨೯. ಶ್ರೀ ರಾಜೀವಗಾಂಧಿ ಎಜುಕೇಷನ್ ಟ್ರಸ್ಟ್, ಮೈಸೂರು.
೩೦. ಎಲ್ಲಮ್ಮ ದಾಸಪ್ಪ ಎಜುಕೇಷನ್ ಟ್ರಸ್ಟ್, ಬೆಂಗಳೂರು.
೩೧. ಪೀಪಲ್ಸ್ ಎಜುಕೇಷನ್ ಟ್ರಸ್ಟ್, ಮಂಡ್ಯ.
೩೨. ಮಹಾತ್ಮಾಗಾಂಧಿ ವಿದ್ಯಾಪೀಠ ಟ್ರಸ್ಟ್, ಬೆಂಗಳೂರು.
೩೩. ಕರ್ನಾಟಕ ಪ್ರದೇಶ ಕುರುಬರ ಸಂಘ ಶಿಕ್ಷಣ ಸಂಸ್ಥೆ ಧಾರವಾಡ.
೩೪. ಶ್ರೀಮತಿ ಕೆಂಪುಚೆಲುವಾಜಮ್ಮಣಿ ಎಜುಕೇಷನ್ ಟ್ರಸ್ಟ್, ಮೈಸೂರು.
೩೫. ಹೇಮಾವತಿ ಎಜುಕೇಷನ್, ಹಾಸನ.
೩೬. ಬಸವೇಶ್ವರ ವಿದ್ಯಾವರ್ಧಕ ಸಂಸ್ಥೆ, ಬಾಗಲಕೋಟೆ.

ಶ್ರೀ ಬಸವರಾಜ ಪಾಟೀಲ್ ಅಟ್ಟೂರ್:- ಮಾನ್ಯ ಅಧ್ಯಕ್ಷರೇ ಬೀದರ್ ಜಿಲ್ಲೆಯು ಬಹಳ ಹಿಂದೆ ಬಿದ್ದಂಥ ಒಂದು ಪ್ರದೇಶ. ಇದು ಆಂಧ್ರ ಮತ್ತು ಮಹಾರಾಷ್ಟ್ರಗಳಿಗೆ ಬಹಳ ಸಮೀಪವಿದ್ದು ಇದು ಗಡಿನಾಡು ಪ್ರದೇಶವಾಗಿದೆ. ಕರ್ನಾಟಕ ರಾಜ್ಯದ ಒಂದು ಕೊನೆಯ ಭಾಗವಾಗಿದೆ. ಹಿಂದುಳಿದ ಪ್ರದೇಶಗಳ ಅಭಿವೃದ್ಧಿಯಾಗಬೇಕಾದರೆ ನಾನು ಕೆಲವು ವಿಚಾರಗಳನ್ನು ಮಾನ್ಯ ಮಂತ್ರಿಯವರ ಗಮನಕ್ಕೆ ತರಬಯಸುತ್ತೇನೆ. ಮೊದಲನೆಯದಾಗಿ ನಮ್ಮ ಜಿಲ್ಲೆಗೆ ಸರಕಾರಿ ವೈದ್ಯಕೀಯ ಕಾಲೇಜನ್ನು ಕೊಡುತ್ತಿರೋ ಎಂದು ಕೇಳಿದ್ದೆ. ಖಾಸಗಿಯವರ ಕಡೆಯಿಂದ ಈ ಬಗ್ಗೆ ಅರ್ಜಿಗಳು ಬಂದಿವೆಯೇ? ಈ ಬಗ್ಗೆ ಸರಕಾರದ ನೀತಿಯನ್ನು ಸ್ಪಷ್ಟವಾಗಿ ಹೇಳಬೇಕು. ಹಾಗೆಯೇ ಬಸವಕಲ್ಯಾಣದಲ್ಲಿ ಒಂದು ಸರಕಾರಿ ವೈದ್ಯಕೀಯ ಕಾಲೇಜನ್ನು ಪ್ರಾರಂಭ ಮಾಡಲು ತಾವುಗಳು ಏನಾದರೂ ಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಜಿ. ರಾಮಕೃಷ್ಣ:- ಈ ವೈದ್ಯಕೀಯ ಕಾಲೇಜುಗಳನ್ನು ಬಹಳಷ್ಟು ಹಿಂದುಳಿದ ಪ್ರದೇಶಗಳಲ್ಲಿ ಪ್ರಾರಂಭ ಮಾಡಬೇಕು, ಅದರಿಂದ ಆ ಪ್ರದೇಶಗಳಿಗೆ ಅನುಕೂಲ ವಾಗುತ್ತದೆ ಎಂಬ ದೃಷ್ಟಿಯಿಂದ ಬಹಳಷ್ಟು ಜನರು ಕೇಳಿಕೊಂಡಿದ್ದಾರೆ. ಎಲ್ಲಿ ಯಾರ್ಯಾರು ಪ್ರಾರಂಭ ಮಾಡಬೇಕೆಂದಿದ್ದಾರೆ ಅಲ್ಲೆಲ್ಲಾ ಕೊಡಬೇಕೆಂದೇನೂ ಇಲ್ಲ. ಈಗ ೧೫-೯-೯೧ ರಿಂದ ೧೫-೯-೯೩ ವರೆಗೆ, ಯಾವ ವೈದ್ಯಕೀಯ ಕಾಲೇಜುಗಳನ್ನು ಮಾಡಲು ಅನುಮತಿ ಕೊಡಬಾರದು ಎಂದು

ಒಂದು ತೀರ್ಮಾನ ಇದೆ. ಆ ಪ್ರಕಾರ ನಾವು ಯಾರಿಗೂ ಅನುಮತಿಯನ್ನು ಕೊಟ್ಟಿಲ್ಲ. ಇನ್ನು ಮುಂದೆ ಕೊಡಬೇಕಾದರೂ ಕೂಡ, ಸುಪ್ರೀಂ ಕೋರ್ಟ್ ಮತ್ತು ಕೇಂದ್ರ ಸರಕಾರದ ಆದೇಶದ ಪ್ರಕಾರ ಅವರ ನೀತಿನಿಯಮಾವಳಿಗಳ ಪ್ರಕಾರ ನಾವು ಕೊಡಬೇಕಾಗುತ್ತದೆ. ಆದ್ದರಿಂದ ಈಗ ಯಾರಿಗೂ ಅನುಮತಿ ಕೊಡಲು ಆಗುವುದಿಲ್ಲ ಎಂಬ ಮಾತನ್ನು ಮಾನ್ಯ ಸದಸ್ಯರಿಗೆ ಹೇಳ ಬಯಸುತ್ತೇನೆ.

ಶ್ರೀ ಬಸವರಾಜ ಪಾಟೀಲ್:- ಮಾನ್ಯ ಅಧ್ಯಕ್ಷರೇ, ಕಳೆದ ೪೦ ವರ್ಷಗಳಲ್ಲಿ ನಮ್ಮ ಸರಕಾರದವರು ಸರಕಾರಿ ವೈದ್ಯಕೀಯ ಕಾಲೇಜುಗಳನ್ನು ರಾಜ್ಯದಲ್ಲಿ ನಾಲ್ಕು ಜಿಲ್ಲೆಗಳಿಗೆ ಮಾತ್ರ ಕೊಟ್ಟಿದ್ದಾರೆ. ಮೂಲಭೂತವಾಗಿ ಖಾಸಗಿಯವರಿಗೆ ಈ ಬಗ್ಗೆ ಅನುಮತಿ ಕೊಡಬಾರದು. ಆದರೆ ಸರಕಾರದವರು ಈ ಕಾಲೇಜುಗಳನ್ನು ಪ್ರಾರಂಭಿಸಲು ಏತಕ್ಕೆ ಕ್ರಮ ತೆಗೆದುಕೊಳ್ಳಬಾರದು? ನಮ್ಮ ಬಸವಕಲ್ಯಾಣವು ಬಹಳ ಹಿಂದುಳಿದ ಗಡಿನಾಡು ಪ್ರದೇಶವಾಗಿದ್ದು ಅಲ್ಲಿ ಪ್ರಾರಂಭ ಮಾಡಿದರೆ ಆ ಭಾಗ ಅಭಿವೃದ್ಧಿಯಾಗಲು ಸಹಾಯವಾಗುತ್ತದೆ.

೧೨.೩೦.ಪಿ.ಎಂ.

ಶ್ರೀ ಬಸವರಾಜಪಾಟೀಲ್ ಅಟ್ಟೂರ್:- ಸರ್ಕಾರ ಬಳ್ಳಾರಿಗೆ ಮೆಡಿಕಲ್ ಕಾಲೇಜ್‌ಕೊಟ್ಟಿದ್ದೀರಿ, ಬೆಂಗಳೂರು, ಮೈಸೂರು ಮತ್ತು ಹುಬ್ಬಳ್ಳಿಗೆ, ಮೆಡಿಕಲ್ ಕಾಲೇಜ್‌ಗಳನ್ನೂಕೊಟ್ಟಿದ್ದೀರಿ, ನಗರ ಪ್ರದೇಶದಜನರಿಗೆ ಏನು ಅನುಕೂಲ ಮಾಡಿಕೊಟ್ಟಿದ್ದೀರೋ ಆ ಪ್ರಕಾರ ಹಳ್ಳಿಯ ಜನರಿಗೆ, ರೈತರ ಮಕ್ಕಳಿಗೆ, ಕೂಲಿಕಾರರ ಮಕ್ಕಳಿಗೆ ಅನುಕೂಲ ಮಾಡಿಕೊಡಲು ಗ್ರಾಮೀಣ ಪ್ರದೇಶದಲ್ಲಿ ಮೆಡಿಕಲ್ ಕಾಲೇಜ್‌ಗಳನ್ನು ಏಕೆ ತೆರೆಯಬಾರದು? ಪ್ರೈವೇಟ್‌ನವರಿಗೆ ಕೊಡಬೇಕು ಎಂದು ನಾನು ಕೇಳುತ್ತಿಲ್ಲ. ನಿಮ್ಮ ಸಂಪುಟದ ನಿರ್ಣಯವನ್ನು ನಾನು ಸ್ವಾಗತಿಸುತ್ತಿದ್ದೇನೆ ಮತ್ತು ಬೆಂಬಲ ವ್ಯಕ್ತಪಡಿಸುತ್ತಿದ್ದೇನೆ. ಗ್ರಾಮೀಣ ಪ್ರದೇಶದ ಮಕ್ಕಳಿಗೆ ವೈದ್ಯಕೀಯ ಶಿಕ್ಷಣ ಕೊಡಲು ಬಹಳ ತೊಂದರೆಯಾಗುತ್ತಿದೆ. ೨ ಲಕ್ಷ, ೩ ಲಕ್ಷ, ೪ ಲಕ್ಷ, ದುಡ್ಡು ಕೊಟ್ಟು ಶ್ರೀಮಂತರು ಈ ಕಾಲೇಜಿಗೆ ಹೋಗುತ್ತಿದ್ದಾರೆ, ಆದರೆ ಗ್ರಾಮೀಣ ಪ್ರದೇಶದ ಬಡಮಕ್ಕಳ ಬಗ್ಗೆ ಸರ್ಕಾರ ಕಾಳಜಿ ವಹಿಸಬೇಕು. ಬಸವಕಲ್ಯಾಣದಲ್ಲಿ ಏಕೆ ಒಂದು ಸರ್ಕಾರಿ ಮೆಡಿಕಲ್ ಕಾಲೇಜ್ ತೆರೆಯಬಾರದು? ಏನು ತೊಂದರೆ ಇದೆ ಈಬಗ್ಗೆ ಮಾನ್ಯಸಚಿವರು ಹೇಳಬೇಕು.

ಶ್ರೀ ಜಿ. ರಾಮಕೃಷ್ಣ:- ಅಧ್ಯಕ್ಷರೇ, ಆ ಭಾಗದ ಪ್ರಮುಖರು ಇಲ್ಲಿ ಮೆಡಿಕಲ್ ಕಾಲೇಜಿಲ್ಲ, ಒಂದು ಕಾಲೇಜನ್ನು ಕೊಟ್ಟರೆ ಆ ಭಾಗದ ಜನರಿಗೆ ಬಹಳ ಅನುಕೂಲ ಆಗುತ್ತದೆಂದು ಕೇಳಿದರು. ಸರ್ಕಾರ ಸ್ಯಾಂಕ್ಷನ್ ಮಾಡಿದಾಗ ಅವರು ಕೇಳಿದ್ದರೆ ಕೊಡಲು ಹಿಂದೆ ಬೀಳುತ್ತಿರಲಿಲ್ಲ, ಈಗ ತಾವೇನು ಕೇಳುತ್ತಿದ್ದೀರಿ, ಮೇಲಿನಿಂದ ಏನು ನಿಯಮಾವಳಿ ಬರುತ್ತದೆ, ಅದನ್ನು ನೋಡಿಕೊಂಡು ತಮ್ಮ ಭಾಗಕ್ಕೊಂದು ಮೆಡಿಕಲ್ ಕಾಲೇಜ್ ಕೊಡುವುದಕ್ಕೆ ನಾನು ಪ್ರಯತ್ನಪಡುತ್ತೇನೆ.

ವಿಷಯ:- ಶಿಕ್ಷಕರುಗಳ ಹುದ್ದೆಯನ್ನು ಭರ್ತಿಮಾಡುವುದು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ ೪೦:- (೫೪೧)
ಶ್ರೀ ಎಸ್. ಶಫಿ ಅಹಮದ್ (ತುಮಕೂರು)
ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿರುವ ಶಿಕ್ಷಕರ ಖಾಲಿ ಹುದ್ದೆಗಳೆಷ್ಟು (ಜಿಲ್ಲಾವಾರು ಮಾಹಿತಿ ನೀಡುವುದು);
ಆ) ಈ ಹುದ್ದೆಗಳನ್ನು ಯಾವಾಗ ತುಂಬಲಾಗುವುದು;